ಕೆಲಸದ ಬಗೆಗೆ ಪೂರ್ವ ಸಿದ್ಧತೆ ಬೇಕೇ ಬೇಕು. ಪತ್ರಿಕೋದ್ಯಮದ ಕೆಲಸ ರಾತ್ರಿ ನಡೆಯುವಂತಹದ್ದು. ಬೆಳಗ್ಗೆ ಒಂಬತ್ತರಿಂದ ಮಧ್ಯಾಹ್ನ ಎರಡರವರೆಗೆ ಕೆಲಸ ಮಾಡುತ್ತಿದ್ದೆ. ಅದರ ನಂತರ ಜನರ ಭೇಟಿ, ಸಂದರ್ಶನ ಮುಂತಾದ ಕೆಲಸ. ನಾನು ಪರಿಚಿತ ಸ್ಥಳದಲ್ಲಿ ಮಾತ್ರ ಕೆಲಸ ಮಾಡಬಲ್ಲೆ. ಪ್ರವಾಸದಲ್ಲಿದ್ದಾಗ ನಾನು ಬರೆಯಲಾರೆ. ಸುತ್ತಲಿನ ಪರಿಸ್ಥಿತಿ ಹಾಗೂ ಪ್ರೇರಣೆಯೂ ಅಷ್ಟೇ ಮಹತ್ವದ್ದು. ಬರವಣಿಗೆಗೆ ಒಂದು ವಿಶಿಷ್ಟ ಮನೋ ಅವಸ್ಥೆಯಿರುತ್ತದೆ. ಆಗ ನೀವು ಸಹಜವಾಗಿ ಬರೆಯಬಲ್ಲಿರಿ. ಮನೋ ಅವಸ್ಥೆ ಹಾಗೂ ಸತ್ವದ ಪ್ರಜ್ಞೆಯು ಅತ್ಯಂತ ಮಹತ್ವದ್ದು. ನಿಮಗೆ ಒಪ್ಪಿಗೆಯಾದ, ತಟ್ಟಿದ ವಿಷಯದ ಬಗೆಗೆ ಸಹಜವಾಗಿ ಬರೆಯಬಹುದು.

ಮೊದಲ ಪರಿಚ್ಛೇದ ಬರೆಯುವುದು ತೀರಾ ಕಷ್ಟ. ಮೊದಲ ಪರಿಚ್ಛೇದ ಬರೆಯಲು ನಾನು ಎಷ್ಟೋ ತಿಂಗಳು ಕಳೆದಿದ್ದೇನೆ. ನಿಮ್ಮ ಗ್ರಂಥದ ಹಲವು ಸಮಸ್ಯೆಗಳನ್ನು ಮೊದಲ ಪರಿಚ್ಛೇದದಲ್ಲೇ ನೀವು ಬಿಡಿಸುತ್ತೀರಿ. ವಿಷಯದ ಆಯ್ಕೆ, ಶೈಲಿ, ಧಾಟಿ – ಇದೆಲ್ಲವೂ ಮಹತ್ವದ್ದು. ಹೀಗಾಗಿ ಕಥೆಯ ಬರವಣಿಗೆ, ಕಾದಂಬರಿಯ ಬರವಣಿಗೆಗಿಂತ ಹೆಚ್ಚು ಜಟಿಲ. ಪ್ರತಿಸಲ ಒಂದು ಕಥೆ ಬರೆಯಲು ಎಲ್ಲ ಸಂಗತಿಗಳನ್ನು ಹೊಸದಾಗಿ ಆರಂಭಿಸಬೇಕಾಗುತ್ತದೆ.

◆ ಪ್ರಖ್ಯಾತಿಯು ಲೇಖಕನಿಗೆ ಮಾರಕವೇ?

ಅದು ನಿಮ್ಮ ಖಾಸಗೀ ಜೀವನದ ಮೇಲೆ ಆಕ್ರಮಣ ಮಾಡುತ್ತದೆ. ನಿಮಗೆ ನಿಮ್ಮ ಮಹತ್ವದ ಕಾರ್ಯ ಮಾಡುವುದು ಸಾಧ್ಯವಾಗುವುದಿಲ್ಲ. ಆಗ ನಿಜವಾದ ಜಗತ್ತಿನಿಂದ ದೂರವಾಗುತ್ತೀರಿ. ನಿಮ್ಮನ್ನು ಅದರಿಂದ ಬೇರ್ಪಡಿಸಲಾಗುತ್ತದೆ. ತನ್ನ ಬರವಣಿಗೆಯನ್ನು ಮುಂದುವರಿಸಲು ಬಯಸುವ ಲೇಖಕನು ಪ್ರಖ್ಯಾತಿಯ ಸಮರ್ಥನೆ ಮಾಡುತ್ತಾನೆ. ನನಗೆ ಇದು ಸರಿಯೆನಿಸುವುದಿಲ್ಲ. ನನಗೆ ಸದಾ ಎನಿಸುವುದೇನೆಂದರೆ, ನನ್ನ ಸಾವಿನ ಬಳಿಕ ನನ್ನ ಪುಸ್ತಕಗಳು ಪ್ರಕಟಗೊಳ್ಳಬೇಕಾಗಿತ್ತು. ಹೀಗಾದರೆ ಶ್ರೇಷ್ಠ ಲೇಖಕ ಎಂಬುದರಿಂದ ಮತ್ತು ಅಪಾರ ಖ್ಯಾತಿಯಿಂದ ನಾನು ಬಿಡುಗಡೆಯಾಗಬಹುದಿತ್ತು. ನನಗೆ ಸಿಕ್ಕ ಖ್ಯಾತಿಯ ಲಾಭವೇನೆಂದರೆ, ಅದನ್ನು ರಾಜಕೀಯ ಕಾರಣಕ್ಕಾಗಿ ಬಳಸುವಂತಾಯಿತು. ಇಪ್ಪತ್ನಾಲ್ಕು ಗಂಟೆ ಪ್ರಖ್ಯಾತಿಯಲ್ಲಿರುವುದೂ ಒಂದು ಸಮಸ್ಯೆಯೇ. ಬಟನ್ ಒತ್ತಿ ಈ ಪ್ರಶ್ನೆಯನ್ನು ಮುಗಿಸುವುದು ಸಾಧ್ಯವಿಲ್ಲ. ಈ ಖ್ಯಾತಿ ಇಲ್ಲಿ ಇಂದು, ನಾಳೆ... ಹೀಗೆ ಸತತ ಶುರುವಿರುತ್ತದೆ.

◆ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಈ ಕಾದಂಬರಿಯ ಯಶಸ್ಸನ್ನು ನೀವು ನಿರೀಕ್ಷಿಸಿದ್ದೀರಾ?

ನಾನು ಹಾಗೇನೂ ಹೇಳಲಾರೆ. ನಾನು ನನ್ನ ಪುಸ್ತಕದ ಸರಿಯಾದ ವಿಮರ್ಶಕನಲ್ಲ. ಕೆಲವರು ಈ ಪುಸ್ತಕ ಲ್ಯಾಟಿನ್ ಅಮೆರಿಕೆಯ ಜನರ ಖಾಸಗೀ ಬದುಕಿಗೆ ಸಂಬಂಧಿಸಿದ್ದು ಎನ್ನುತ್ತಾರೆ. ಇದು ಅಂತರಾಳದಿಂದ ಬರೆದ ಪುಸ್ತಕ. ಆರಂಭದಲ್ಲಿ ಇದಕ್ಕೆ 'ದ ಹೌಸ್' ಎಂಬ ಹೆಸರು ನೀಡಿದ್ದೆ, ಕಾದಂಬರಿಯ ಕಥಾನಕ ಮನೆಯೊಳಗೇ ನಡೆಯಬೇಕೆಂಬ ಯೋಜನೆ ಹಾಕಿದ್ದೆ. ಆನಂತರ 'ದ ಹೌಸ್' ಎಂಬ ಹೆಸರನ್ನು ಕೈ ಬಿಟ್ಟೆ. ಎರಡನೆಯ ಅಭಿಪ್ರಾಯವೇನೆಂದರೆ ಇಲ್ಲಿಯ ಪಾತ್ರಗಳಲ್ಲಿ ಪ್ರತಿಯೊಬ್ಬ ವಾಚಕ 'ತನ್ನನ್ನು' ಕಾಣುತ್ತಾನೆ.